




## ಇದು ಭೂಗೋಳವಲ್ಲದ ಭೂಗೋಳ

ಮಾನವ ನಿರ್ಮಿತ ಮತ್ತು ನೈಸರ್ಗಿಕ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳಲು ಪ್ರಾಥಮಿಕವಾಗಿ ಬಳಸುವ ಶಾಖೆ ಭೂಗೋಳ. ಭೂಗೋಳ ಶಾಸ್ತ್ರವನ್ನು ನಾವೆಲ್ಲರೂ ಶಾಲೆಯ ಪಠ್ಯವಾಗಿ ಓದಿದ್ದೇವೆ. ಕೇವಲ ಸಂಖ್ಯೆ, ಹೆಸರುಗಳ ಬಾಯಿಪಾಠಕ್ಕೇ ಭೂಗೋಳ ಸೀಮಿತವಾಗಿರುವಾಗ, ತದ್ವಿರುದ್ಧವೆಂಬಂತೆ ಕಥೆ, ಚಿತ್ರಮಾಲಿಕೆ ಹಾಗೂ ಹೊಸಛಾಪಿನ ನಕ್ಷೆಗಳನ್ನು ಬಳಸಿ ಕೌತುಕತೆಯನ್ನು ತೆರೆಯುವ ಶಿವರಾಮ ಕಾರಂತರ ಚಿತ್ರಮಯ ದಕ್ಷಿಣಕನ್ನಡ ಯಾವ ಟ್ರಾವೆಲಾಗ್‌ಗಳಿಗೂ ಕಮ್ಮಿಯಿಲ್ಲ. ಅವರೇ ಹೇಳಿದಂತೆ ಇದು ಭೂಗೋಳವನ್ನು ಹೇಳ ಹೊರಟಿರುವ ಹೊಸ ಧಾಟಿ. ಕಾರಂತರ ಚಿತ್ರಮಯ ದಕ್ಷಿಣಕನ್ನಡ ಪುಸ್ತಕ ಅವಿಭಜಿತ ದಕ್ಷಿಣಕನ್ನಡದ ಜನಜೀವನ ಪರಿಸರದ ಕೈಪಿಡಿ. ಅವರೇ ಕರೆದಿರುವಂತೆ ಮಕ್ಕಳ ಶಿಕ್ಷಣ ಮಾಲೆಯ ಬಾಲಕರ ಭೂಗೋಳ ಹೊತ್ತಿಗೆ. 1934ರಲ್ಲಿ ಜರ್ಮನಿಯ ಫೋಟೊಗ್ರೇವ್ಯೂರ್ ಮುದ್ರಣ ತಂತ್ರಗಾರಿಕೆಯಲ್ಲಿ ಚಿತ್ರ ನಕ್ಷೆಗಳನ್ನು ಹಿತಮಿತವಾಗಿ ಜೋಡಿಸಿ ಹೆಣೆದ ಅತ್ಯಂತ ಸುಂದರ ಪುಸ್ತಕವಿದು.

ಕಿಟ್ಟುವಿನ ಪಾತ್ರದೊಂದಿಗೆ ಸಹ್ಯಾದ್ರಿಯ ಬೆಡಗ ಬೆನ್ನೇರಿ ಒಂದೊಂದೇ ಅಧ್ಯಾಯಗಳು ಓದುಗನ ಎದುರಿಗೆ ತೆರೆದುಕೊಳ್ಳುತ್ತವೆ ಈ ಪುಸ್ತಕದಲ್ಲಿ. ಕಿಟ್ಟು ಪುಟ್ಟುರಾಮು ಬೆಟ್ಟದ ಸೆರಗಿನಿಂದ ವನರಾಶಿಯನ್ನು ಹಾದು, ಕಾಡು ಬೆಟ್ಟಗಳ ಮಹತ್ವವನ್ನು ತಿಳಿಯುತ್ತಾ, ಬಯಲಿಗೆ ಬರುತ್ತಾರೆ. ಕಿಟ್ಟು ಹಾಗೂ ಅವನ ಗೆಳೆಯರು ನದಿಯ ಜಾಡಿನಲ್ಲಿ, ಜಾತ್ರೆ ಹರಿದಿನ ಹಬ್ಬಗಳಲ್ಲಿ, ಸಂತೆ, ಕಂಬಳದ ಮಜಲು ಗದ್ದೆಯ ಬದುವಿನಲ್ಲಿ ಸಂಚರಿಸಿ ಪ್ರದೇಶವನ್ನು ಅರಿತುಕೊಳ್ಳುತ್ತಾರೆ. ಹಳ್ಳಿಯ, ಪರಾವಲಂಬನೆಯಿಲ್ಲದ, ಗ್ರಾಮಸ್ವರಾಜ್ಯದ ಸುಖಿಜೀವನದ ಚಿತ್ರಣವನ್ನು ಕಣ್ಣಮುಂದೆ ಸ್ಥಾಪಿಸುತ್ತದೆ. ಹದಿನಾಲ್ಕು ಅಧ್ಯಾಯಗಳಲ್ಲಿ ಹೇಳಲ್ಪಟ್ಟ ಹೆಗ್ಗುರುತುಗಳ 95 ಚಿತ್ರಗಳ ಮಾಲಿಕೆ ಕೊನೆಯಲ್ಲಿದೆ. ಈ ಹೊಸರೂಪದ ಶೈಲಿಯ ಪ್ರಯೋಗ ಇಂದಿಗೆ ಸುಮಾರು ತೊಂಬತ್ತು ವರ್ಷಗಳ ಹಿಂದೆಯೇ ಕಾರಂತರು ಆಲೋಚಿಸಿದ್ದು, ಪ್ರಶಂಸನೀಯವೇ. ಈ ಪುಸ್ತಕದಿಂದ ನಮಗರಿವಿಲ್ಲದೆಯೇ ದಕ್ಷಿಣಕನ್ನಡದ ಭೌಗೋಳಿಕತೆಯನ್ನು ಆಸ್ವಾದಿಸಬಹುದು.

**–ವಿಶ್ವನಾಥ ಭಟ್**, ಧಾರವಾಡ

ಪುಸ್ತಕದ ಡಿಜಿಟಲ್ ಪ್ರತಿಗಾಗಿ ಲಿಂಕ್:
https://tinyurl.com/4md8swcr

## ಇವು ಕಾಷ್ಠಕದ ಹ್ಯಾಂಗರ್

ಚಿತ್ರದಲ್ಲಿ ಕಾಣುತ್ತಿರುವುದು ಹಳೆಯ ಕಾಲದ ಒಂದು ಮಾದರಿಯ ಹ್ಯಾಂಗರ್. ಹಿಂದೆಲ್ಲಾ ರಾಜರ, ಪಾಳೇಗಾರರ, ಜಮೀನ್ದಾರರ ಮನೆಗಳಲ್ಲಿ ಬಟ್ಟೆಗಳನ್ನು ನೇತು ಹಾಕಲು ಮರದಿಂದ ಮಾಡಿದ ಹ್ಯಾಂಗರ್‌ಗಳನ್ನು ಬಳಸುತ್ತಿದ್ದರು. ಆ ಜಾಗಕ್ಕೆ ಈಗ ತರಹೇವಾರಿ ಹ್ಯಾಂಗರ್‌ಗಳು ಬಂದಿವೆ. ಚಿತ್ರದಲ್ಲಿ ಕಾಣುತ್ತಿರುವುದು ಮರದಿಂದ ಮಾಡಿದ ಹ್ಯಾಂಗರ್. ಕಲಾತ್ಮಕವಾಗಿ ಕಾಣುವ ಈ ಮರದ ಹ್ಯಾಂಗರ್ ಅನ್ನು ಮಡಚಬಹುದು. ಬೇರೆ ಬೇರೆ ಆಕಾರಕ್ಕೂ ಎಳೆಯಬಹುದು. ಹೀಗೆ ಎಳೆದಾಗ ಇಡೀ ಹ್ಯಾಂಗರ್ ವಿಜ್ಞಾನದ ಯಾವುದೋ ಸೂತ್ರವೊಂದರ ಸೂಚಕದಂತೆ ಗೋಚರವಾಗುತ್ತದೆ. ಹಿಂದೆಲ್ಲ ತುಂಬ ಕಲಾತ್ಮಕವಾಗಿ ಮರದಿಂದ ಹ್ಯಾಂಗರ್‌ಗಳನ್ನು ಮಾಡಲಾಗುತ್ತಿತ್ತು. ಅತ್ಯಂತ ನಾಜೂಕಿನಿಂದ ಮಾಡುತ್ತಿದ್ದ ಮರದ ಹ್ಯಾಂಗರ್‌ಗಳನ್ನು ಇಂದಿಗೂ ಕೆಲವರ ಮನೆಗಳ ಗೋಡೆಗಳಲ್ಲಿ ಕಾಣಬಹುದು. ಇದು ಮಕ್ಕಳ ಕೈಗೆ ಸಿಕ್ಕರೆ ಆಟದ ವಸ್ತುವಾಗಬಲ್ಲದು.

**–ಸಿ.ಕೆ. ರಶ್ಮಿ**, ವಿಜಯನಗರ

